ನೋಟಿಫಿಕೇಶನ್ ಹೊರಡಿಸಿದ್ದೇವೆ. ಇದು 15-20 ವರ್ಷಗಳ ವಿಚಾರ... ನಾವು ಡಿಸೆಂಬರ್ 31 ಕ್ಕೆ ಮಾತು ಕೊಟ್ಟಿದ್ದು ನಿಜ. ಆದರೆ, practical difficultyಯಿಂದ ಸ್ವಲ್ಪ ತಡವಾಗಿದೆ. ಆದರೂ you must appreciate the fact that the government is keen to implement.

ಹಟ್ಟಿ ಚಿನ್ನದ ಗಣಿ ಕಂಪೆನಿಯಲ್ಲಿ ಕಾರ್ಮಿಕರನ್ನು ವಜಾ ಮಾಡಿರುವುದು

65 (343) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಕಂಪೆನಿಯಲ್ಲಿ ಮೊದಲು ವಜಾಗೊಂಡ 12 ಕಾರ್ಮಿಕರನ್ನು ಪನಃ ಸೇವೆಗೆ ತೆಗೆದು ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇದೇ ಮಾನದಂಡವನ್ನು ಅನುಸರಿಸಿ ಈ ಮೊದಲು ವಜಾಗೊಂಡ 52 ಕಾರ್ಮಿಕರನ್ನೂ ಸೇವೆಗೆ ತೆಗೆದುಕೊಳ್ಳಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು;

ಇ. ಸದರಿ ಕಾರ್ಮಿಕರನ್ನು ಯಾವ ಆಧಾರದ ಮೇಲೆ ಪುನಃ ಸೇವೆಗೆ ತೆಗೆದುಕೊಳ್ಳಲಾಗಿದೆ; ಹಾಗೂ ಸೇವೆಗೆ ತೆಗೆದುಕೊಳ್ಳದ ಕಾರ್ಮಿಕರನ್ನು ಯಾವ ಆಧಾರದ ಮೇಲೆ ಪುನಃ ನೇಮಕ ಮಾಡಿಕೊಳ್ಳಲಾಗುವುದು?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ. ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ. ಈ 52 ನೌಕರರನ್ನು ಪುನಃ ಸೇವೆಗೆ ತೆಗೆದುಕೊಳ್ಳುವ ಪ್ರಶ್ನೆ ಸರ್ಕಾರದ ಮುಂದಿಲ್ಲ.

ಇ. ಪುನರ್ ನೇಮಕಗೊಂಡ 12 ಜನ ವಜಾ ಆಗಿದ್ದ ನೌಕರರ ವಿಷಯದಲ್ಲಿ, ಅವರಲ್ಲಿ ಒಂದೇ ಒಂದು ಸಾಮಾನ್ಯ ಅಶಿಸ್ತು ಇತ್ತು. ಅಂದರೆ, ನ್ಯಾಯಬಾಹಿರ ಮುಷ್ಕರಕ್ಕೆ ಕಾರ್ಮಿಕರನ್ನು ಪ್ರಚೋದಿಸಿದ ನಂತರ ಕಂಪೆನಿಗೆ ದೊಡ್ಡ ನಷ್ಟವನ್ನುಂಟು ಮಾಡಿದ್ದರು. ಆದರೂ, ಸರ್ಕಾರ ಉದಾರ ಮತ್ತು ದಯೆಯ ಅಭಿಪ್ರಾಯವನ್ನು ತಳೆದು ಅವರನ್ನು ಹೊಸ ನಿಯುಕ್ತ ವ್ಯಕ್ತಿಗಳೆಂದು ಹಿಂದಕ್ಕೆ ತೆಗೆದು ಕೊಳ್ಳಲಾಯಿತು. ಆದ್ದರಿಂದ, ಎರಡು ಪ್ರಕರಣಗಳು ಸಂಪೂರ್ಣವಾಗಿ ಬೇರೆಯಾದವು ಮತ್ತು ಅವುಗಳನ್ನು ಹೋಲಿಸಲಾಗುವುದಿಲ್ಲ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಒದಗಿಸಿದ್ದು, ಉತ್ತರದಲ್ಲಿ ಪುನರ್ ನೇಮಕಗೊಂಡ 12 ಜನ ವಜಾ ನೌಕರರ ವಿಷಯದಲ್ಲಿ ಅವರಲ್ಲಿ ಒಂದೇ ಒಂದು ಸಾಮಾನ್ಯ ಅಶಿಸ್ತು ಇತ್ತು. ಆದಕಾರಣ ಅವರನ್ನು ಪುನರ್ ನೇಮಕ ಮಾಡಿಕೊಳ್ಳಲಾಗಿದೆಯೆಂದು ತಿಳಿಸಿದ್ದಾರೆ. ನನಗೆ ತಿಳಿದಿರುವಂತೆ ಸರ್ಕಾರವಾಗಲಿ, ಯಾವುದೇ ಕಂಪನಿಯಾಗಲಿ ಒಂದು ಸಲ ಒಬ್ಬ ನೌಕರರನ್ನು ಡಿಸ್‌ಮಿಸ್ ಮಾಡಿದಾಗ, ಅವರನ್ನು ಪುನರ್ ನೇಮಕ ಮಾಡಿಕೊಳ್ಳುವ ಅಧಿಕಾರ ಸರ್ಕಾರಕ್ಕಾಗಲಿ ಅಥವಾ ಆ ಕಂಪನಿಗಾಗಲಿ ನೇರವಾಗಿ ಇಲ್ಲ. ಅಥವಾ ಅವರನ್ನು ಪುನರ್ ನೇಮಕ ಮಾಡಿಕೊಳ್ಳಬೇಕಾಗಿದ್ದರೆ ಯಾವುದೇ ಕೋರ್ಟ್‌ನಿಂದ ಆದೇಶ ಬಂದಿರಬೇಕು. ಆದರೆ, ಯಾವುದೇ ಕೋರ್ಟ್‌ನಿಂದ ಆದೇಶ ಬಾರದೆ ಇವರನ್ನು ಪುನಃ ನೇಮಿಸಿದ್ದಾರೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿರುವ ಜನರನ್ನೂ ಕೂಡ ನೇಮಕ ಮಾಡಿಕೊಳ್ಳಬೇಕೆಂದು ನಾನೂ ಕೂಡ ಅವರಿಗೆ ಮನವಿ ಕೊಟ್ಟಿದ್ದೇನೆ. ನನ್ನ ಮನವಿಯನ್ನು ಪುರಸ್ಕರಿಸದೆ ಕೇವಲ 12 ಜನರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕಾದರೆ ಇದರಲ್ಲಿ ರಾಜಕೀಯ ಹಿತಾಸಕ್ತಿ ಇರಬೇಕು ಅಥವಾ ಇದರಲ್ಲಿ ಅಧಿಕಾರಿಗಳು ಒಳ ವ್ಯವಹಾರ

ನಡೆಸಿ ಈ ನೇಮಕ ಮಾಡಿಕೊಂಡಿದ್ದಾರೆಂದು ನನಗೆ ಶಂಕೆ ಇದೆ. ಆದಕಾರಣ, ಮಂತ್ರಿಗಳಿಂದ ಇದಕ್ಕೆ ಸಮರ್ಪಕವಾದ ಉತ್ತರ ಬಯಸುತ್ತೇನೆ.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿರುವಂತೆ 12 ಜನರನ್ನು ನೇಮಕಾತಿ ಮಾಡಿರುವುದು ನಿಜ. ಅವರು ನ್ಯಾಯಬಾಹಿರವಾಗಿ ಯಾವುದೇ ಮುಷ್ಕರಕ್ಕೆ ಪ್ರೋತ್ಸಾಹಿಸುವ ಮೂಲಕ ಪ್ರಚೋದನೆ ಉಂಟುಮಾಡಿದರೆನ್ನುವ ಒಂದೇ ಒಂದು ಕಾರಣಕ್ಕಾಗಿ ಅವರ ಮೇಲೆ ಕ್ರಮ ಜರುಗಿಸಲಾಗಿತ್ತು. ಈ ಆರೋಪಕ್ಕನುಗುಣವಾಗಿ ಅವರು ಕಂಪನಿಗೆ ಮತ್ತೆ ಮನವಿ ಸಲ್ಲಿಸಿದರು. ಮನವಿಗಳನ್ನು ಪರಿಶೀಲಿಸಿದಾಗ ಅವರು ಒಂದೇ ಒಂದು ಅಶಿಸ್ತು ಮಾತ್ರ ಮಾಡಿದ್ದಾರೆ, ಮತ್ಯಾವುದೇ ಸಂದರ್ಭದಲ್ಲಿ ಅಶಿಸ್ತು ಮಾಡಿಲ್ಲವೆಂದು ಸಾಬೀತಾದ ನಂತರ ಮಾನವೀಯತೆ ದೃಷ್ಟಿಯಿಂದ 12 ಜನರನ್ನು ಪುನರ್ ನೇಮಕ ಮಾಡಲಾಗಿದೆ. ಆದರೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ 52 ಜನರು 1996ರಿಂದ 2000 ವರೆಗೂ ವಿವಿಧ ರೀತಿಯ ಅವ್ಯವಹಾರಗಳಲ್ಲಿ ತೊಡಗಿದ್ದಾರೆ. ಉದಾಹರಣೆಗೆ, ಕಳ್ಳತನ ಮಾಡಿರುವಂತಾದ್ದು, ಅನಧಿಕೃತವಾಗಿ ದೀರ್ಘಾವಧಿ ಗೈರುಹಾಜರಾಗಿರುವಂತಾದ್ದು ಮತ್ತು ಅನೇಕ ಸಂದರ್ಭಗಳಲ್ಲಿ ಮಾನೇಜ್‌ಮೆಂಟ್‌ನ ವಿವಿಧ ಹಂತಗಳಲ್ಲಿರುವ ಮ್ಯಾನೇಜರ್‌ಗಳನ್ನು ಹೊಡೆದಿರುವುದು. ಇವೆಲ್ಲಾ ಆರೋಪಗಳಿಗೆ ಒಳಗಾಗಿರುವುದರಿಂದ, ಈ ಕುರಿತಂತೆ ಅವರು ಮೇಲ್ಮನವಿಗೆ ಅರ್ಜಿ ಸಲ್ಲಿಸಿದ್ದರೂ ವಿಚಾರಣೆ ಕೈಗೊಂಡು ಅಂತಿಮವಾಗಿ ಅವರನ್ನು ವಜಾಗೊಳಿಸಲಾಗಿದೆ. ಕಾನೂನುಬದ್ಧವಾಗಿ ಅವರ ಮೇಲೆ ಅಶಿಸ್ತು ಪ್ರಕರಣ ಸಾಬೀತಾಗಿರುವುದರಿಂದ ಪುನರ್ ನೇಮಕ ಮಾಡುವುದಕ್ಕೆ ಅವರು ಅನರ್ಹರು, ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಕಂಪನಿಯು ತೀರ್ಮಾನಿಸಿದೆ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ: ಈ 12 ಜನರ ಮೇಲೆ ಏನು ಆರೋಪಗಳಿದ್ದವು, ಇದಕ್ಕಿಂಥಲೂ ಸಣ್ಣ ತಪ್ಪು, ಮಾಡಿರುವ, ಒಂದು ತಿಂಗಳಿನಲ್ಲಿ ನಾಲ್ಕು ದಿವಸ, ವರ್ಷದಲ್ಲಿ 15-20 ದಿವಸಗಳ ಕಾಲ ಅನಧಿಕೃತವಾಗಿ ಗೈರುಹಾಜರಾಗಿದ್ದವರನ್ನು ಕೆಲಸದಿಂದ ತೆಗೆದುಹಾಕಿದ್ದೀರಿ. ಅವರನ್ನು ಪುನರ್ ನೇಮಕ ಮಾಡಿಕೊಳ್ಳಬೇಕೆಂದು ಕೋರ್ಟ್ ಆದೇಶ ಕೊಟ್ಟಿದ್ದರೂ ಅವರನ್ನು ಪುನರ್ ನೇಮಿಸಿರುವುದಿಲ್ಲ. ಆದರೆ, 12 ಜನರಿಗೆ ಸಂಬಂಧಿಸಿದಂತೆ ನೀವು ಎನ್‌ಕ್ವೇರಿ ಕಂಡಕ್ಟ್ ಮಾಡಿದ್ದರೂ ಅವರು ಅಟೆಂಡ್ ಮಾಡಿಲ್ಲ. ಡಿಪಾರ್ಟ್‌ಮೆಂಟಲ್ ಎನ್‌ಕ್ವೇರಿ ಕಂಡಕ್ಟ್ ಮಾಡಿದ್ದರೂ ಅದಕ್ಕೂ ಅಟೆಂಡ್ ಆಗಿಲ್ಲ, ಅವರು ಯಾವುದಕ್ಕೂ ಅಟೆಂಡ್ ಆಗಿಲ್ಲ. ಅವರು ನೇರವಾಗಿ ಮುಖ್ಯಮಂತ್ರಿಗಳಿಗೆ ಅರ್ಜಿ ಸಲ್ಲಿಸಿದ್ದು, ಇವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಲಿಖಿತ ಮೂಲಕ ಆದೇಶ ಮಾಡಿರುವುದರ ಮೇಲೆ ಇವರನ್ನು ಪುನರ್ ನೇಮಕ ಮಾಡಿಕೊಳ್ಳಲಾಗಿದೆಯೇ ವಿನಾ ರಾಜಕೀಯ ಹಿತಾಸಕ್ತಿ ಬೆಳೆಸಿಕೊಂಡು, ನಿಮ್ಮ ಸರ್ಕಾರದ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಕಳೆದ ಅಧಿವೇಶನದ ಸಂಬರ್ಭದಲ್ಲೂ ಸಹ ಇದಕ್ಕೆ ಸಂಬಂಧಿಸಿದಂತೆ ಸಮರ್ಪಕ ಉತ್ತರ ಕೊಡಬೇಕೆಂದು ತಮ್ಮನ್ನು ಕೇಳಿದಾಗ, ನನ್ನ ಸಮಕ್ಷಮದಲ್ಲಿಯೇ ಸಮಸ್ಯೆ ಬಗೆಹರಿಸುವುದಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರು. ಆದರೆ, ಈ ಸಂಬಂಧವಾಗಿ ಮಂತ್ರಿಗಳು ಇದುವರೆವಿಗೂ ನನ್ನನ್ನು ತಮ್ಮ ಕೊಠಡಿಗೆ ಕರೆಸಿರುವುದಿಲ್ಲ 'ತಮ್ಮ ಸಂಧಾನದ ಮೂಲಕವೇ ಇದನ್ನು ಬಗೆಹರಿಸೋಣ' ಎಂದು ಹೇಳಿದ್ದರೂ ಅದಕ್ಕೂ ತಾವು ಸಮರ್ಪಕವಾಗಿ ಸ್ಪಂದಿಸಿರುವುದಿಲ್ಲ. ಆದುದರಿಂದ, ನಾನು ಪುನಃ

ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, 52 ಜನರಲ್ಲಿ ಎಲ್ಲರನ್ನೂ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿಲ್ಲ. ಯಾರು ಅತಿ ಸಣ್ಣ ತಪ್ಪು ಮಾಡಿದ್ದಾರೋ, ಅನಧಿಕೃತವಾಗಿ ಗೈರುಹಾಜರಾಗಿದ್ದಾರೋ, ನಿರಪರಾಧಿಗಳಾಗಿದ್ದಾರೋ ಅಥವಾ ಕಿರು ಬೆರಳು ಕಳೆದುಕೊಂಡು unfit ಎಂದು ಹೇಳುವ ಮೂಲಕ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನೂ ಸಹ ಕೆಲಸದಿಂದ ತೆಗೆದುಹಾಕಿದ್ದೀರಿ.

ಒಂದು ಕಡೆ ಬಲಗಾಲನ್ನು ಕಳೆದುಕೊಂಡಂಥ ವ್ಯಕ್ತಿಗೆ ಪುನಃ ನಿಮ್ಮ ಕಂಪನಿಯಲ್ಲಿ ಕೆಲಸವನ್ನು ಕೊಡುತ್ತೀರಿ, ಇದು ಯಾವ ನೀತಿ? ಆ ನೀತಿಯನ್ನು ನಾನು ಪ್ರಶ್ನೆ ಮಾಡಿದ್ದೇನೆಯೇ ಹೊರತು ಅದಕ್ಕೆ ಸರಿಯಾಗಿ ಸಚಿವರು ಸ್ಪಂದಿಸುತ್ತಿಲ್ಲ, ಆದ್ದರಿಂದ ದಯವಿಟ್ಟು ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಹಿಂದಿನ ಅಧಿವೇಶನದಲ್ಲಿ ನಮ್ಮ ನಾಯಕರಾದ ಮಾನ್ಯ ಸಿಂಧ್ಯಾರವರು ನನ್ನ ಪರವಾಗಿ ಈ ಪ್ರಶ್ನೆಯನ್ನು ಕೇಳಿದ್ದಾಗ ನನ್ನನ್ನು ಕರೆದು ಅವರ ಕೊಠಡಿಯಲ್ಲಿ ಮಾತನಾಡುವುದಾಗಿ ಸಚಿವರು ಭರವಸೆಯನ್ನು ಕೊಟ್ಟಿದ್ದರು. ಆದರೆ ಇದುವರೆಗೆ ಆ ಕೆಲಸವಾಗಿಲ್ಲ. ಆ ಕೆಲಸ ಆಗಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಮರು ನೇಮಕಾತಿ ಮಾಡುವುದಕ್ಕೆ ನಿಗಮಕ್ಕೆ ಅಧಿಕಾರವಿಲ್ಲವೆಂಬುದು ಸರಿಯಲ್ಲ. ನೇಮಕಾತಿ ಪ್ರಾಧಿಕಾರಕ್ಕೆ ಮರು ನೇಮಕಾತಿ ಮಾಡಿಕೊಳ್ಳುವ ಅಧಿಕಾರವಿದೆ. ಆದರೆ ಆಯಾಯ ಆರೋಪಗಳಿಗೆ ಅನುಗುಣವಾಗಿ, ಚಾರ್ಜ್‌ಸ್‌ಗೆ ಅನುಗುಣವಾಗಿ ಮರು ನೇಮಕಾತಿ ಮಾಡುತ್ತಾರೆ. ನೀವು ಹೇಳಿರತಕ್ಕ ಈ 12 ಜನರ ಮೇಲಿರುವ ಆರೋಪ ಸಿಂಪಲ್ ಇನ್ ನೇಚರ್ ಎಂದು ಹೇಳುತ್ತಾರೆ. ಅಂಥ ಸೀರಿಯಸ್ ಆಗಿರಲಿಲ್ಲ. ಒಂದೇ ಒಂದು ಇನ್‌ಡಿಸಿಪ್ಲಿನ್ ಆಗಿದ್ದಿದ್ದು.

ಶ್ರೀ ಅಮರೇಗೌಡ ಪಾಟೀಲ್ ಬೈಯಾಪುರ: ನಾನು 12 ಜನರನ್ನು ತೆಗೆದುಕೊಂಡಿದ್ದು ಸರಿಯಲ್ಲವೆಂದು ಹೇಳಲಿಲ್ಲ. ಅನ್ಯಾಯವೆಂದು ಹೇಳಲಿಲ್ಲ. ಅದು ಒಳ್ಳೆಯದೇ ನಿಮ್ಮ ಹಿತಾಸಕ್ತಿಯಿಂದ ಅದು ಒಳ್ಳೆಯದೇ.

ಶ್ರೀ ವಿ.ಮುನಿಯಪ್ಪ: ಇದರಲ್ಲಿ ಯಾವುದೇ ರಾಜಕೀಯವಿಲ್ಲ. ನೇರವಾಗಿ ಹೇಳುತ್ತೇನೆ. 12 ಜನ ಸರ್ಕಾರಕ್ಕೂ, ಮಾನ್ಯ ಮುಖ್ಯಮಂತ್ರಿಗಳಿಗೂ, ಅಲ್ಲಿರತಕ್ಕಂಥ ಸಿ.ಎಂ.ಡಿ. ಯವರಿಗೂ ಮನವಿ ಸಲ್ಲಿಸಿದ್ದಾರೆ. ಅವರ ಮೇಲಿರತಕ್ಕದ್ದು ಒಂದೇ ಒಂದು ಇನ್‌ಡಿಸಿಪ್ಲಿನ್. ಅದೇನೆಂದರೆ, ನ್ಯಾಯಾಬಾಹಿರವಾದಂಥ ಮುಷ್ಕರಕ್ಕೆ ಪ್ರೋತ್ಸಾಹ ಮಾಡಿದರು ಎಂಬ ಒಂದೇ ಆರೋಪದ ಮೇಲೆ ಅವರುಗಳನ್ನು ಅಮಾನತ್ತು ಮಾಡಿದ್ದು. ಅವರುಗಳು ಮನವಿಮಾಡಿ, ನಾವು ಇನ್ನು ಮುಂದೆ ಈ ರೀತಿಯಾದಂಥ ಕುತಂತ್ರ ಕಾರಿಯಾದ ಪ್ರಚೋದನಾಕಾರಿಯಾದ ಕೆಲಸಗಳನ್ನು ಮಾಡುವುದಿಲ್ಲವೆಂದು ಹೇಳಿದಮೇಲಿಯೇ, ಅಪಾಲಜಿ ಬರೆದು ಕೊಟ್ಟಮೇಲೆಯೇ ಮರು ನೇಮಕಾತಿ ಮಾಡಲಾಗಿದೆ. ಆದರೆ ಇವರು ಹೇಳತಕ್ಕ 52 ಜನರ ಮೇಲೆ ಬೇರೆ ಬೇರೆ ಚಾರ್ಜ್‌ಸ್‌ಗಳು ಇದೆ. ಕಳ್ಳತನದಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಮೆನೇಜ್‌ಮೆಂಟ್ ನವರೊಂದಿಗೆ ಹೊಡೆದಾಡಿದ್ದಾರೆ, ಅನಧಿಕೃತವಾಗಿ ಓವರ್ ಎ ಪಿರಿಯಡ್ ಗೈರುಹಾಜರಾಗಿದ್ದಾರೆ, ಅಂಥವರನ್ನೆಲ್ಲಾ ಮರುನೇಮಕಾತಿ ಮಾಡಿ ಕೊಂಡು ಹೋದರೆ ನಿಗಮವನ್ನು ಡಿಸಿಪ್ಲಿನ್ ಆಗಿ ನಡೆಸುವುದು ಬಹಳ ಕಷ್ಟ.

ಶ್ರಿ ಅಮರೇಗೌಡ ಪಾಟೀಲ್ ಬೈಯಾಪುರ: ಅವರನ್ನು ಅಮಾನತ್ತು ಮಾಡಿಲ್ಲ. ನೇರವಾಗಿ ಡಿಸ್‌ಮಿಸ್ ಮಾಡಿದ್ದಾರೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ, ಸಂಪಗಿಯವರೇ, ತಾವು ಕೇಳಿ.

ಶ್ರಿ ಅಮರೇಗೌಡ ಪಾಟೀಲ್ ಬೈಯಾಪುರ: ಸರ್ಕಾರದಿಂದ ನನಗೆ ಅವಮಾನ ಮಾಡತಕ್ಕ ಕೆಲಸವಾಗಿದೆ. ಆದ್ದರಿಂದ ನಾನು ಸದನದಿಂದ ನಿರ್ಗಮಿಸುತ್ತಿದ್ದೇನೆ.
(ಮಾನ್ಯ ಸದಸ್ಯರು ಸದನದಿಂದ ನಿರ್ಗಮಿಸಿದರು)

ಶ್ರಿ ಎಸ್.ಎಸ್.ಪಾಟೀಲ್: ಹಿಂದಿನ ಅಧಿವೇಶದಲ್ಲಿ ಮಾನ್ಯ ಮಂತ್ರಿಗಳು ಅವರನ್ನು ಕರೆಸಿ ಸಮಾಧಾನ ಮಾಡುತ್ತೇನೆಂದು ಹೇಳಿದ್ದವರು, ಕೊನೆಯ ಪಕ್ಷ ತಾವು ಅವರನ್ನು ಕರೆಸಿ ಮಾತನಾಡಬಾರದೆ? ಹೋದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಅವರನ್ನು ಕರೆಸಿ ಮಾತನಾಡುತ್ತೇನೆಂದು ಉತ್ತರ ಕೊಟ್ಟಿದ್ದಾರೆ. ತಮಗೆ ಬೇಕಾದಾಗ ತೆಗೆದುಕೊಳ್ಳುವುದು, ಬೇಡದವರನ್ನು ತೆಗೆದುಬಿಡುವುದು.

ಶ್ರಿ ವಿ.ಮುನಿಯಪ್ಪ: ಮಾನ್ಯ ಅಮರೇಗೌಡರು ನನ್ನ ಕಛೇರಿಗೆ ಮುರ್ನಾಕು ಸಲ ಬಂದಿದ್ದಾರೆ. ಈ ವಿಚಾರದಲ್ಲಿ ಅವರೊಂದಿಗೆ ಚರ್ಚೆ ಮಾಡಿದ್ದೇನೆ. ಕಾನೂನು ಬದ್ಧವಾಗಿ ಆದಕ್ಕೆ ಅವಕಾಶವಿಲ್ಲವೆಂದು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. 6ನೇ ತಾರೀಖು ಮಾರ್ಚ್ 2002 ರಲ್ಲಿ ಇದೇ ಪ್ರಶ್ನೆ ಇದೇ ಸದನದಲ್ಲಿ ಪ್ರಸ್ತಾಪವಾಗಿದೆ. ಆಗ ನಿಖರವಾದಂಥ ಉತ್ತರವನ್ನೂ ಕೊಟ್ಟಿದ್ದೇನೆ. ಮತ್ತೆ ಪ್ರಸ್ತಾಪ ಮಾಡಿದರೆ ನಾವು ಹೇಗೆ ಉತ್ತರ ಕೊಡಬೇಕು?

ಸರ್ಕಾರಕ್ಕೆ ಬಾಕಿ ನೀಡಬೇಕಾದ ಗಣಿ ಗುತ್ತಿಗೆದಾರರು

66(662) ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸರ್ಕಾರಕ್ಕೆ ಬಾಕಿ ಹಣ ನೀಡಬೇಕಾಗಿರುವ ಗಣಿ ಗುತ್ತಿಗೆದಾರರು ಯಾರು;

ಆ. ಕಳೆದ 3 ವರ್ಷಗಳಿಂದ ಬಾಕಿ ನೀಡದೇ ಇರುವವರ ಮೇಲೆ ಕೈಗೊಂಡಿರುವ ಕ್ರಮವೇನು?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ. 2001-2002ನೇ ಸಾಲಿನ ಅಂತ್ಯದವರೆಗೆ 11,530 ಗಣಿ ಗುತ್ತಿಗೆದಾರರು ಸರ್ಕಾರಕ್ಕೆ ಬಾಕಿ ಹಣ ನೀಡಬೇಕಾಗಿದೆ.

ಆ. ಬಾಕಿದಾರರಿಗೆ ನಿಯಮಗಳ ಪ್ರಕಾರ ನೋಟೀಸು ಜಾರಿ ಮಾಡಲಾಗಿದೆ. ಬಾಕಿ ಪಾವತಿಸದ ಗುತ್ತಿಗೆ ಗಳನ್ನು ರದ್ದುಪಡಿಸಲು ಕ್ರಮ ತೆಗೆದು ಕೊಳ್ಳ ಲಾಗುತ್ತಿದೆ. ಬಾಕಿ ವಸೂಲಾತಿಗೆ ಆರ್.ಆರ್.ಸಿ. ಜಾರಿ ಮಾಡಲಾಗಿದ್ದು, ಭೂ ಕಂದಾಯದಂತೆ, ಕಂದಾಯ ಇಲಾಖೆಯ ಮೂಲಕ ಬಾಕಿಯನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಉತ್ತರ ಹೇಗಿದೆಯೆಂದರೆ, ಗುತ್ತಿಗೆದಾರರಿಗೆ ರಕ್ಷಣೆ ಕೊಡತಕ್ಕದ್ದಾಗಿದೆ. ಸರ್ಕಾರಕ್ಕೆ ಬಾಕಿ ಹಣ ನೀಡಬೇಕಾಗಿರುವ ಗಣಿ ಗುತ್ತಿಗೆದಾರರು ಯಾರು ಎಂದು ಕೇಳಿದ್ದೇನೆ. ಅವರ್ಯಾರು ಎಂದು ಹೆಸರೇ ಇಲ್ಲಿ ಇಲ್ಲ. ಅವರು 2001-02ನೇ ಸಾಲಿನ ಅಂತ್ಯದವರೆಗೆ 11,530 ಗುತ್ತಿಗೆದಾರರು ಸರ್ಕಾರಕ್ಕೆ ಬಾಕಿ ಹಣ ನೀಡಬೇಕಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಎಷ್ಟು ಹಣ? ಯಾರ್ಯಾರು? ಎಷ್ಟು ಸಮಯದಿಂದಬಾಕಿ ಇದೆ?